# Para Medical Board, Bengaluru

**Address:** #5, New No: 40/20A, Lakshmi Complex, First Floor, Opp. Vani Vilas Hospital, Fort, Bengaluru-560002

**Contact No**: 080-26702159, 26705773, 26703922 Fax: 26705410


**No: PMB/285/2015-16** **Date:** 11/3/16

## ವಿಶೇಷ ಸೂಚನೆ

**ವಿಷಯ:** ರಾಜ್ಯದಲ್ಲಿ ಅನಧಿಕೃತ ಸಂಸ್ಥೆಗಳು ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭಿಸಲು ತಮ್ಮ ಸಂಸ್ಥೆಯೊಂದಿಗೆ ಸಂಯೋಜನೆ ಪಡೆಯುವಂತೆ ಪ್ರಚಾರ ಮಾಡುತ್ತಿರುವ ಬಗ್ಗೆ.

ಕರ್ನಾಟಕ ರಾಜ್ಯ ಸಕಾರದ ಅನುಮತಿ ಪಡೆಯದೆ ಈ ಕೆಳಕಂಡ ಸಂಸ್ಥೆಗಳು ಅನಧಿಕೃತವಾಗಿ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭಿಸಲು ತಮ್ಮ ಸಂಸ್ಥೆಗಳೊಂದಿಗೆ ಸಂಯೋಜನೆ ಮಾಡಿಕೊಳ್ಳುವಂತೆ ಕರ್ನಾಟಕ ರಾಜ್ಯದ ಪ್ಯಾರಾ ಮೆಡಿಕಲ್ ಬೋರ್ಡ್‌ನೊಂದಿಗೆ ಸಂಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಪ್ಯಾರಾ ಮೆಡಿಕಲ್ ಸಂಸ್ಥೆಗಳ ಮನ ಒಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಉದಾ: 1) Bio-Chemic Education Grant Commission
2) National Institute of Open Schooling
3) Bharath Sevak Samaj
4) All India Medical Technology Education
5) Add on Diploma Course in Technical Education sponsored by UGC ಮತ್ತು ಇತರೆ.

ಆದುದರಿಂದ, ಈ ಮಂಡಳಿಯ ಮೂಲಕ ರಾಜ್ಯದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ನಡೆಸುತ್ತಿರುವ ಎಲ್ಲಾ ಪ್ಯಾರಾ ಮೆಡಿಕಲ್ ಕಾಲೇಜು/ ಸಂಸ್ಥೆಗಳಿಗೆ ಈ ತಿಳಿಸುವುದೇನೆಂದರೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಸಂಯೋಜನೆಗೆ ಸಂಬಂಧಿಸಿದಂತೆ ಮೇಲ್ಕಂಡ ಸಂಸ್ಥೆಗಳೊಂದಿಗೆ ಯಾವುದೇ ರೀತಿಯ (ಸಂಬಂಧ/ ಒಪ್ಪಂದ) ವ್ಯವಹಾರವನ್ನು ನಡೆಸದೆ ತಮ್ಮ ಸಂಸ್ಥೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ರಾಜ್ಯ ಸರ್ಕಾರದಿಂದ ನಡೆಸುತ್ತಿರುವ ಪ್ಯಾರಾ ಮೆಡಿಕಲ್ ಬೋರ್ಡ್‌ನೊಂದಿಗೆ ಸಂಯೋಜನೆ ಪಡೆದು ಸಂಸ್ಥೆಗಳನ್ನು ನಡೆಸಿಕೊಂಡು ಹೋಗಬೇಕೆಂದು ಈ ಮೂಲಕ ತಿಳಿಸಲಾಗಿದೆ ಹಾಗೂ ಒಂದು ಪಕ್ಷ ಮಂಡಳಿಯ

**Para Medical Board, Bengaluru**

**Address:** #5, New No: 40/20A, Lakshmi Complex, First Floor, Opp. Vani Vilas Hospital, Fort, Bengaluru-560002

**Contact No**: 080-26702159, 26705773, 26703922 Fax: 26705410

ನಿರ್ದೇಶನವನ್ನು ಮೀರಿ ಯಾವುದಾದರು ಸಂಸ್ಥೆ ಮೇಲ್ಕಂಡ ಸಂಸ್ಥೆಗಳೊಂದಿಗೆ ಸಂಯೋಜನೆ ಪಡೆದು ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ನಡೆಸಿ ಅದರಿಂದ ಮುಂದೆ ವಿದ್ಯಾರ್ಥಿಗಳಿಗೆ ಕೋರ್ಸಿನ ಮಾನ್ಯತೆ ಸಿಗದೆ ತೊಂದರೆಯಾದಲ್ಲಿ ಅದಕ್ಕೆ ಆ ಸಂಸ್ಥೆಯೇ ನೇರ ಹೊಣೆಯಾಗುತ್ತದೆ ಎಂದು ತಿಳಿಸಲಾಗಿದೆ.

<u>ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ:</u>

ಪ್ಯಾರಾ ಮೆಡಿಕಲ್ ಕೋರ್ಸ್ ಒದಬೇಕೆಂದು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಯಾವುದೇ ಪ್ಯಾರಾ ಮೆಡಿಕಲ್ ಸಂಸ್ಥೆಯಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶಾತಿ ಪಡೆಯುವ ಮೊದಲು ಆ ಸಂಸ್ಥೆ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಪ್ಯಾರಾ ಮೆಡಿಕಲ್ ಬೋರ್ಡ್‌ನೊಂದಿಗೆ ಸಂಯೋಜನೆ ಪಡೆದಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಸಂಯೋಜನೆ ಪಡೆದಿರುವಂತಹ ಸಂಸ್ಥೆಯಲ್ಲಿ ಪ್ರವೇಶಾತಿಯನ್ನು ಪಡೆದು ವ್ಯಾಸಂಗ ಮಾಡಬೇಕೆಂದು ಮಂಡಳಿಯು ಈ ಮೂಲಕ ಕೋರುತ್ತದೆ. ವಿದ್ಯಾ ಸಂಸ್ಥೆಯ ಬಗ್ಗೆ ಯಾವುದಾದರೂ ಅನುಮಾನವಿದ್ದಲ್ಲಿ ಮಂಡಳಿಯ Website: <u>www.pmbkarnataka.org</u> ಗೆ ಭೇಟಿ ನೀಡಿ ಪರಿಶೀಲಿಸುವುದು ಅಥವಾ ಮಂಡಳಿಯ ದೂರವಾಣಿ ಸಂಖ್ಯೆ: 080-26702159, 26705773, 26703922 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ಸದಸ್ಯ ಕಾರ್ಯದರ್ಶಿಗಳು